# 'ಪರಿಸರ ಸಮತೋಲನ ಕೆಡಿಸುವ ಪ್ರವೃತ್ತಿಗೆ ಕಡಿವಾಣ ಅನಿವಾರ್ಯ'

ಶಿರಸಿ ಬ್ಯೂರೋ ವರದಿ

ಶಿರಸಿ: ''ಪರಿಸರ ಸಮತೋಲನ ಹಾಳುಮಾಡುವ ಮನುಷ್ಯನ ಪ್ರವೃತ್ತಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇದೆ'' ಎಂದು ಸ್ವರ್ಣವಲ್ಲಿಶ್ರೀ ಹೇಳಿದರು

ಅವರು ಶನಿವಾರ ಸಂಜೆ ಸ್ವರ್ಣವಲ್ಲಿಯಲ್ಲಿ ರಾಷ್ಟ್ರ ಮಟ್ಟದ ಕೆರೆ ಸಮ್ಮೇಳನದ ಸಮಾರೋಪದಲ್ಲಿ ಮಾತನಾಡಿ, ''ದೇಶ, ಪರಿಸರ ಹಾಗೂ ಕೆರೆಗಳ ಭವಿಷ್ಯ ಇರುವುದು ಇಂದಿನ ಮಕ್ಕಳ ಕೈಯಲ್ಲಿ, ಅವರೇ ಅದನ್ನು ಸಂರಕ್ಷಿಸಿ ಮುಂದಿನ ಜನಾಂಗಕ್ಕೆ ಹಸ್ತಾಂತರಿಸಬೇಕು'' ಎಂದರು.



ಸ್ವರ್ಣಶ್ರೀಗಳು ವೃಕ್ಷಲಕ್ಷ ಪ್ರಶಸ್ತಿಯನ್ನು ವಿಷ್ಣುಮಯಾನಂದ ಸ್ವಾಮೀಜಿಗೆ ನೀಡುತ್ತಿರುವುದು

''ಕಾವೇರಿಯಲ್ಲಿ ನೀರಿನ ಕೊರತೆಯಾಗಿ ಗಡಿ ವ್ಯಾಜ್ಯ ಬಂದಿದೆ. ಕಾವೇರಿ ಸುತ್ತ ಕೆರೆಗಳ ಅಭಿವೃದ್ಧಿ,ನೀರಿನ ಮೂಲಗಳ ಸಂರಕ್ಷಣೆಯಾದರೆ, ಕಾಡು ಹೆಚ್ಚಿ ಮಳೆಯು ಆಗುವ ಜತೆಗೆ ನೀರಿನ ಸಮಸ್ಯೆ ಇರುವದಿಲ್ಲ. ಎರಡು ರಾಜ್ಯಗಳು ನೀರಿಗಾಗಿ ಗದ್ದಲ ಮಾಡಬೇಕಾದ ಪರಿಸ್ಥಿತಿ ಬರೋಲ್ಲ'' ಎಂದರು.

ಪೇಜಾವರ ಶ್ರೀಗಳು ಸಾನಿಧ್ಯ ವಹಿಸಿದ್ದರು. ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಡಾ ವಾಮನ ಆಚಾರ್ಯ ಮಾತನಾಡಿದರು.

ಈ ಸಂದರ್ಭದಲ್ಲಿ ವಿಷ್ಣುಮಯಾನಂದ ಸ್ವಾಮೀಜಿಗೆ ರಾಜ್ಯ ಮಟ್ಟದ ವೃಕ್ಷಲಕ್ಷ ಪ್ರಶಸ್ತಿ ನೀಡಲಾಯಿತು. ಅತಿಥಿಗಳಾಗಿ, ವೈ ಬಿ ರಾಮಕೃಷ್ಣ, ಸುರೇಶ ಹೆಬ್ಬೀಕರ ವೇದಿಕೆಯಲ್ಲಿದ್ದರು. ಮಠದ ಉಪಾಧ್ಯಕ್ಷ ವಿ ಎನ್ ಹೆಗಡೆ ಅಧ್ಯಕ್ಷತೆ ವಹಿಸಿದ್ದರು. ಯುವ ವಿಜ್ಞಾನಿ ಪ್ರಶಸ್ತಿಯನ್ನು ಸಂಯೋಜಕ ಟಿ ವಿ ರಾಮಚಂದ್ರ ಘೋಷಿಸಿದರು. ಅನಂತ ಆಶೀಸರ ಸ್ವಾಗತಿಸಿದರು. ಗಣಪತಿ ಬಿಸಲಕೊಪ್ಪ ಕಾರ್ಯಕ್ರಮ ನಿರ್ವಹಿಸಿದರು. ಶಾಂತಾರಾಮ ಸಿದ್ದಿ ನಿರ್ಣಯ ಓದಿದರು.